# ಆರಾಧ್ಯದೈವ ಬಾಳಿ ಬದುಕಿದ ನೆಲಕ್ಕೆ ತೀರ್ಥಯಾತ್ರೆ

◆ ಕುವೆಂಪು

[ನೆನಪಿನ ದೋಣಿಯಲ್ಲಿ ಕೃತಿಯಲ್ಲಿ ಕುವೆಂಪು ಅವರು ತಮ್ಮ ಬೇಲೂರು ಮಠದ ಯಾತ್ರೆಯ ಸವಿನೆನಪುಗಳನ್ನು ದಿನಚರಿಯಲ್ಲಿ ದಾಖಲಿಸಿದ ಭಾಗ.]

**೭-೧೦-೧೯೨೯ನೆಯ ಸೋಮವಾರ**

ಬಂಗಾಳವು ವಿಸ್ತಾರಗೊಂಡ ಮಲೆನಾಡು. ಒಂದೆ ವ್ಯತ್ಯಾಸ: ಅಲ್ಲಿ (ದಕ್ಷಿಣ ಭಾರತದ ಮಲೆನಾಡಿನಲ್ಲಿ)ಗುಡ್ಡ ಬೆಟ್ಟ, ಕಣಿವೆಗಳು ಹೆಚ್ಚು, ಇಲ್ಲಿ ಸಮಭೂಮಿಯೆ ಜಾಸ್ತಿ. ಆ ನೀರು, ಆ ಹಸುರು, ಆ ಗದ್ದೆ ಎಲ್ಲವೂ ಇಲ್ಲಿವೆ.... ಇಂತಹ ರಮಣೀಯವಾದ ಐಶ್ವರ್ಯ ಮಂಗಳಸೂಚಕ ವಾದ ದೃಶ್ಯಗಳನ್ನು ಹಾಯ್ದು ರೈಲು ಹೌರಾ ಸ್ಟೇಷನ್ನಿಗೆ ಬಂದಿತು. ಹೌರಾ ಸ್ಟೇಷನ್ ದೊಡ್ಡದು. ಆದರೆ ನನಗೆ ಯಾವ ವಿಧದಲ್ಲಿಯೂ ಹೊಸದಾಗಿಯಾಗಲಿ ದೊಡ್ಡ ದಾಗಿಯಾಗಲಿ ಕಾಣಲಿಲ್ಲ. ಬಹುಶಃ ಹಿಂದಿನ ಜನ್ಮದಲ್ಲಿ ಇಲ್ಲೆಲ್ಲ ಓಡಾಡಿರಬಹುದೆ? ಏನೊ ಯಾರಿಗೆ ಗೊತ್ತು? ಅಲ್ಲಿಂದ ಒಂದು ಮೋಟಾರನ್ನು ಬಾಡಿಗೆಗೆ ತೆಗೆದುಕೊಂಡು ಬೇಲೂರು ಮಠಕ್ಕೆ ಹೊರಟೆವು.



*ಕುವೆಂಪು ಕಂಡ ಬೇಲೂರು ಮಠ*

"ನೋಡದೋ ಸ್ವಾಮೀಜಿಯ ಸಮಾಧಿ ಮಂದಿರ! ನೋಡದೋ ಬೇಲೂರು ಮಠ! ನೋಡದೋ ದಕ್ಷಿಣೇಶ್ವರ ದೇವಾಲಯ! ಜಯ್ ಮಹಾಮಾಯಿಕಿ ಜೈ!" ಎಂದು ಸ್ವಾಮಿ ಸಿದ್ಧೇಶ್ವರಾನಂದರು ಉದ್ಘೋಷಿಸಿದರು. ನನಗೆ ಎದೆ ಉಬ್ಬಿ ಹೋಯಿತು. ಇದುವರೆಗೆ ದಕ್ಷಿಣೇಶ್ವರ, ಬೇಲೂರು, ಕಲ್ಕತ್ತ ಎಲ್ಲ ಪುಸ್ತಕದಲ್ಲಿಯೆ ಇದ್ದುವು. ಈಗ ಕಣ್ಣಿಗೆ ಗೋಚರ ವಾದುವು. ಅಲ್ಲದೆ ಯಾರನ್ನು ನಾನು ಅವತಾರ ಪುರುಷ ನೆಂದು ಪೂಜಿಸುವೆನೊ ಅಂಥಾ ಮಹಾವ್ಯಕ್ತಿ ಭಗವಾನ್ ಶ್ರೀರಾಮಕೃಷ್ಣ ಪರಮಹಂಸ ಗುರುದೇವನು ಬಾಳಿ ಬದುಕಿದ ನೆಲ; ಆತನ ಅಡಿಯ ಪುಡಿಯಿಂದ ಪವಿತ್ರವಾದ ಸ್ಥಳ. ಅಲ್ಲದೆ ಕಾವ್ಯಗಳಲ್ಲಿ ಅಮರತೆಯನ್ನು ಪಡೆದ ಗಂಗಾ ಮಾತೆಯ ಪ್ರಥಮ ಸಂದರ್ಶನ. ನನಗಾದ ಅನುಭವವನ್ನು ಇಲ್ಲಿ ಚುಟುಕಿಯಲ್ಲಿ ವರ್ಣಿಸಲಸದಳ!

ಮಠವನ್ನು ಸೇರಿದೆವು. ಶರ್ವಾನಂದ ಅನಂತಾನಂದರಿಗೆ ನಮಸ್ಕಾರವಾಯಿತು. ನಮ್ಮ ಗಂಟುಮೂಟೆಗಳನ್ನು ತೆಗೆದು ಅತಿಥಿಗಳ ಕೊಠಡಿಯಲ್ಲಿಟ್ಟೆವು. ಸ್ನಾನವನ್ನು ಮುಗಿಸಿ ಸ್ವಾಮಿ ವಿವೇಕಾನಂದರು, ಮಹಾಮಾತೆ, ಬ್ರಹ್ಮಾನಂದರು ಇವರ ಗಂಗಾತೀರಸ್ಥವಾಗಿದ್ದ ಸಮಾಧಿ ಮಂದಿರಗಳನ್ನು ದರ್ಶನ ಮಾಡಿಕೊಂಡು ಶ್ರೀಗುರುಮಂದಿರಕ್ಕೆ ಹೋಗಿ ಅಡ್ಡ ಬಿದ್ದು ಊಟ ಪೂರೈಸಿದೆವು. ಮಹಾಪುರುಷಜಿ (ಸ್ವಾಮಿ ಶಿವಾ ನಂದರು) ತಮ್ಮ ಕೋಣೆಯಲ್ಲಿ ವಿಶ್ರಮಿಸುತ್ತಿದ್ದುದರಿಂದ, ಮೂರು ಗಂಟೆಯ ತರುವಾಯ ನೋಡಬಹುದೆಂದು ಲೈಬ್ರರಿ ಗೃಹಕ್ಕೆ ಹೋಗಿ ಸ್ವಲ್ಪ ವಿಶ್ರಮಿಸಿಕೊಂಡೆವು. ಅಭಿರಾಮತಮ ವಾದ ಬೇಲೂರು ಮಠವು ತತ್ತ್ವದೃಷ್ಟಿಯಿಂದಲೂ ರಸದೃಷ್ಟಿ ಯಿಂದಲೂ ಮನಸ್ಸನ್ನು ಸ್ವರ್ಗದೆಡೆಗೆ ತೇಲಿಸುವಂತಿದೆ.

ಮೂರು ಗಂಟೆಯಾದ ಮೇಲೆ ಭಗವಾನ್ ಶ್ರೀರಾಮ ಕೃಷ್ಣರ ಪ್ರಿಯಶಿಷ್ಯರೂ ಸಚ್ಚಿದಾನಂದವನ್ನು ಸಾಕ್ಷಾತ್ಕಾರ ಮಾಡಿಕೊಂಡವರೂ ಸಿದ್ಧಪುರುಷರೂ ನನ್ನ ಆತ್ಮಗುರುಗಳೂ ಪ್ರೇಮ ಕರುಣ ದಯಾಮಯರೂ ಒಲ್ಮೆಯ ಮುದ್ದೆಯೂ ಆದ ಸ್ವಾಮಿ ಶಿವಾನಂದರ ದರ್ಶನಕ್ಕಾಗಿ ಹೊರಟೆವು. ನಾನು ಸ್ವಲ್ಪ ವಿಮರ್ಶಕ ದೃಷ್ಟಿಯುಳ್ಳವನು. ತರ್ಕಶಾಸ್ತ್ರ ಅಧ್ಯಾತ್ಮ ಶಾಸ್ತ್ರಗಳನ್ನು ಓದಿದವನಾದುದರಿಂದ ಯಾವುದನ್ನೂ ನೋಡದೆ ನುಂಗಿಬಿಡುವುದಿಲ್ಲ; ಎಲ್ಲಿಯಾದರೂ ಗುಳುಮ್ಮನೆ ಹಾರಿಬಿಡುವುದಿಲ್ಲ. ಆದರೆ ನಾನು ಕವಿಯೂ ಹೌದು. ರಸ ಯೋಗಿಯೂ ದಿಟ. ಆದ್ದರಿಂದ ತರ್ಕವರಿಯದ ಕೇವಲ ಆತ್ಮಾನುಭವಗಳನ್ನು ಅರಿಯಬಲ್ಲ ಶಕ್ತಿಯಿದೆ. ಅಂದರೆ ತತ್ತ್ವಜ್ಞಾನಿಗೆ ಇರಬೇಕಾದ ಮನೋಸೂಕ್ಷ್ಮತೆಯೂ ಕವಿಗೆ ಇರಬೇಕಾದ ಯೌಗಿಕ ದೃಷ್ಟಿಯೂ ನನ್ನಲ್ಲಿ ಇವೆ. ಆದ್ದರಿಂದ ನಾನು ಮಹಾಪುರುಷಜಿಯ ಬಳಿಗೆ ಹೋಗುವಾಗ ತತ್ತ್ವಜ್ಞ ನಾಗಿಯೂ ಕವಿಯಾಗಿಯೂ ಹೋದೆ.

ಮೆಟ್ಟಲುಗಳನ್ನು ಹತ್ತಿ ಮಹಡಿಗೆ ಹೋದೆವು. ಅಲ್ಲಿ ತಮ್ಮ ಕೋಣೆಯಲ್ಲಿ ಮಹಾಪುರುಷಜಿ ಮೂರ್ತಿವೆತ್ತ ಕರುಣೆಯಂತೆ ಮೈಗೊಂಡ ಪ್ರೇಮದಂತೆ ಆರಾಮ ಕುರ್ಚಿಯ

*ಪ್ರಾಯೋಜಕರು* : ಎಸ್. ವಿ. ಆರ್. ಏಜೆನ್ಸೀಸ್, ನಂ.2, 3ನೇ ಕ್ರಾಸ್, ಪಿ.ಬಿ. ನಂ.6970, ಹೊಸ ಬಡಾವಣೆ, ಬೆಂಗಳೂರು -560 002



*ಕುವೆಂಪು ಅವರ ದೀಕ್ಷಾಗುರು ಸ್ವಾಮಿ ಶಿವಾನಂದರು*

ಮೇಲೆ ಒರಗಿಕೊಂಡು ಕುಳಿತಿದ್ದರು. ಆ ಮೃದುಲ ಸ್ವಭಾವದ ವೃದ್ಧದೇಹದ, ನಿರಹಂಕಾರದ ಮೂರ್ತಿಯನ್ನು ಕಂಡೊಡನೆ "ಈತನೀಗ ಮಹಾಪುರುಷ!" ಎಂದುಕೊಂಡೆ. ಅವರ ಮುಂದುಗಡೆ ಒಂದು ಹುಕ್ಕಾ ಇತ್ತು. ಕೋಣೆಯಲ್ಲಿ ನಾಲ್ಕೈದು ಪಟಗಳಿದ್ದುವು. ಒಂದು ಕಡೆ ಅವರ ಮಲಗುವ ಮಂಚ, ಕೆಲವು ಪುಸ್ತಕಗಳು ಮತ್ತೊಂದು ಕಡೆ. ಒಂದೆಡೆ ಒಂದು ಮೇಜು.

ಮೊದಲು ಸಿದ್ಧೇಶ್ವರಾನಂದರು ಹೋಗಿ ಪ್ರಣಾಮ ಮಾಡಿದರು: ತರುವಾಯ ಮಾನಪ್ಪನು ನಾವು ಮೈಸೂರಿನಿಂದ ತಂದಿದ್ದ ಶ್ರೀ ಚಾಮುಂಡಿ ಮಾತೆಯ ಬೆಳ್ಳಿಯ ವಿಗ್ರಹವನ್ನು ಅರ್ಪಿಸಿ ನಮಿಸಿದನು. ನಾನು ಊದಿನಕಡ್ಡಿಗಳ ಕಟ್ಟುಗಳನ್ನು ಅರ್ಪಿಸಿ ನಮಿಸಿದೆನು. ಸಿದ್ಧೇಶ್ವರಾನಂದರು ನಮ್ಮ ಪರಿಚಯ ಹೇಳಿದರು: ನಾವು ಅವರನ್ನೆ ನೆಮ್ಮಿದ್ದೇವೆ: ನಾವು ಅವರ ಮಾನಸಪುತ್ರರು: ನಮ್ಮನ್ನು ಕಾಪಾಡಬೇಕು ಎಂದರು. ಅದಕ್ಕೆ ಅವರು "ನಾನಾರು? ನಾನಾರು? ನಾನಾರು?" ಎಂದು ಎರಡು ಮೂರು ಸಲ ಗಂಭೀರವಾಣಿಯಿಂದ ಉಚ್ಚರಿಸಿ "ಎಲ್ಲ ಗುರುಮಹಾರಾಜ್! ಎಲ್ಲ ಗುರುಮಹಾರಾಜ್! ನಾನಾರು? ಎಲ್ಲ ಅವನೆ! ಆತನಿಷ್ಟವಿದ್ದಂತಾಗಲಿ!" ಎಂದರು. "ನನಗೇನು ಗೊತ್ತು? ನನಗೇನು ಗೊತ್ತು? ಎಲ್ಲ ಅವನಿಗೆ ಗೊತ್ತು! ನಾನು ಅವನ ಆಜ್ಞಾಪಾಲಕ!" ಎಂದು ಅವರು ಹೇಳಿದಾಗ ಅವರ ನಮ್ರತೆ ವಿಶ್ವವನ್ನೆ ಗೆದ್ದ ಮಹಾತ್ಮನ ದೈನ್ಯತೆಯಂತೆ ಇತ್ತು. ದಡ್ಡರು "ನನಗೇನು ಗೊತ್ತು" ಎಂದು ಹೇಳುವುದಕ್ಕೂ ಬ್ರಹ್ಮಸಾಕ್ಷಾತ್ಕಾರ ಮಾಡಿಕೊಂಡ ಆದರ್ಶಸಿದ್ಧಪುರುಷನು "ನನಗೇನು ಗೊತ್ತು?" ಎಂದು ಹೇಳುವುದಕ್ಕೂ ಅಜಗಜಾಂತರ ತಾರತಮ್ಯವಿದೆ.

ನಮ್ಮ ಹೆಸರನ್ನು ಕೇಳಿದರು. ತಾವೇ ಎರಡು ಸಲ ಉಚ್ಚರಿಸಿದರು. ಸ್ವಲ್ಪ ಹೊತ್ತು ಅವರ ಮುಂದೆ ನಿಂತಿದ್ದೆವು. ಶ್ರೀಗುರುಮಹಾರಾಜರು ಹೇಗಿದ್ದರು ಎಂಬುದು ಸ್ವಲ್ಪಮಟ್ಟಿಗಾದರೂ ಗೊತ್ತಾಗುತ್ತದೆ ಮಹಾಪುರುಷಜಿಯನ್ನು ನೋಡಿದರೆ, ಅವರು ಭಗವಾನರ ಪ್ರತಿಬಿಂಬ. ಅವರ ಮುಂದೆ ನಿಂತಾಗ ಒಬ್ಬ ಮಹಾಪುರುಷನ ಮುಂದೆ ನಿಂತಂತಾಗುತ್ತದೆ. ಅವರೊಂದು ದೊಡ್ಡ ಸಾಗರ. ನಾನು ನೋಡಿದ ಇತರ ಮಹಾ ವ್ಯಕ್ತಿಗಳಲ್ಲಿ ಯಾರಲ್ಲಿಯೂ ತೋರದ ಒಂದು ಅಲೌಕಿಕ ಆಧ್ಯಾತ್ಮಿಕ ಮಹಿಮೆ ಇವರಲ್ಲಿದೆ! ಜಯ ಗುರುದೇವ!

ತರುವಾಯ ಸ್ವಾಮಿ ವಿವೇಕಾನಂದರ ಕೊಠಡಿಗೆ ಹೋದೆವು. ಅವರು ಇಹಲೋಕವನ್ನು ಬಿಡುವಾಗ ಅವರ ಕೋಣೆ ಯಾವ ರೀತಿ ಇತ್ತೋ ಈಗಲೂ ಅದೇ ರೀತಿ ಇದೆ. ನೋಡಿದರೆ ಸ್ವಾಮೀಜಿ ಎಲ್ಲಿಯೋ ಕ್ಷಣಕಾಲ ಹೊರಗೆ ಹೋಗಿದ್ದಾರೆ, ಇನ್ನೇನು ಬಂದುಬಿಡುತ್ತಾರೆ, ಕಾದುಕೊಂಡಿರೋಣ ಎನ್ನುವ ಹಾಗಿದೆ. ಅವರ ಪಾದುಕೆಗಳಿಗೆ ನಮಸ್ಕಾರ ಮಾಡಿದೆವು.

ಕೋಣೆಯ ಒಂದು ಭಾಗದಲ್ಲಿ ಮಲಗುವ ಮಂಚ, ಒಂದು ಮೇಜು, ಒಂದು ಕುರ್ಚಿ, ಅಲ್ಲಿ ಒಂದು ಬುದ್ಧನ ವಿಗ್ರಹ. (ಅದು ಈಚೆಗೆ ಇಟ್ಟಿದ್ದಂತೆ.) ಅವರು ಉಪಯೋಗಿಸುತ್ತಿದ್ದ ತಂಬೂರಿ, ಕೊಡೆ, ದಂಡ, ಬಟ್ಟೆಬರೆ, ಪುಸ್ತಕ ಎಲ್ಲಾ ಅಲ್ಲಿ ಇವೆ. ಸ್ವಲ್ಪವೂ ವ್ಯತ್ಯಾಸವಾಗಿಲ್ಲ. ಅಲ್ಲಿಯೆ ಮೂರು ದೊಡ್ಡದಾದ ಪರಮಹಂಸರ ತೈಲಚಿತ್ರಗಳೂ ಸ್ವಾಮೀಜಿಯ ಭಾವಚಿತ್ರಗಳೂ ಇವೆ. ಹಾಸಗೆಯ ಮೇಲೆ ಸ್ವಾಮೀಜಿಯ ಪಟಗಳನ್ನು ಇಟ್ಟಿದ್ದಾರೆ. "ಸ್ವಾಮೀಜಿ ಇಲ್ಲಿ ಮಲಗುತ್ತಲೆ ಇರಲಿಲ್ಲ. ಅಲ್ಲಿ ಹೊರಗಡೆ ವರಾಂಡದಲ್ಲಿ ಒಂದು ಬರಿಯ ಚಾಪೆಯ ಮೇಲೆ ಮಲಗುತ್ತಿದ್ದರು" ಎಂದರು ಸ್ವಾಮಿ ಸಿದ್ಧೇಶ್ವರಾನಂದರು.

ಅಲ್ಲಿಂದ ಮಹಡಿಯ ವರಾಂಡಕ್ಕೆ ಹೋಗಿ ನಿಂತುಕೊಂಡೆವು. ಎಂತಹ ದೃಶ್ಯ! ತುಂಬಿ ಹರಿಯುವ ಬಿತ್ತರದ ಎದೆಯ ಗಂಗಾಮಾತೆ ಕೆಂಗಾವಿಯುಟ್ಟಂತೆ ಕೆಂಪಾಗಿ ಹರಿಯುತ್ತಿರುವಳು. ಅಲ್ಲಲ್ಲಿ ದೋಣಿಗಳು, ಜಹಜುಗಳು, ಇಕ್ಕೆಲಗಳಲ್ಲಿಯ ನದಿಯ ತೀರದಲ್ಲಿ ಮಹಾಸೌಧಗಳ ಸಾಲು. ಅಲ್ಲಲ್ಲಿ ದಟ್ಟವಾಗಿ ತಳಿರಿಡಿದ ಹಸುರಿನ ಮರಗಳ ತೋಪುಗಳು. ಈ ಸ್ಥಳವನ್ನು ಗೊತ್ತು ಹಚ್ಚಿ ಈ ರೀತಿ ಮಠ ಕಟ್ಟಿದ ಆ ರುದ್ರ ಸಂನ್ಯಾಸಿಯ ಹೃದಯದಲ್ಲಿ ಎಂತಹ ರಸಿಕತೆ ಇರಬೇಕು!

ತರುವಾಯ ಆರತಿ ಮುಗಿಸಿಕೊಂಡು ದೇವರ ಗುಡಿಯನ್ನು ಚೆನ್ನಾಗಿ ದರ್ಶನ ಮಾಡಿದೆವು. ಹಾಲುಗಲ್ಲುಗಳ ಚಪ್ಪಡಿಗಳಿಂದ ನುಣುಪಾಗಿ ಮಾಡಲ್ಪಟ್ಟ ನೆಲವು ತಣ್ಣಗಿತ್ತು. ಒಳಗೆ ಪೀಠದಲ್ಲಿ ಒಂದು ಚಿಕ್ಕ ಗುರುಮಹಾರಾಜರ ಶಿಲಾಕೃತಿಯಿದೆ. ಪಕ್ಕದ ಕೋಣೆಯೆ ಅವರ ಮಲಗುವ ಮನೆ. ಗುಡಿಯಿಂದ ಮಹಾಪುರುಷಜಿ ಇರುವ ಕೋಣೆಗೆ ಮಹಡಿಯ ಮೇಲೆಯೆ ಒಂದು ದಾರಿಯಿದೆ. ಮುದುಕರಾದ ಅವರು ಆಗಾಗ ಅಲ್ಲಿ ತಿರುಗಾಡುವರು.

ಪ್ರಾಯೋಜಕರು: ರವಿ ಪ್ರಾಡಕ್ಟ್ಸ್ – ಅರಿಶಿನ,ಮೆಣಸಿನಕಾಯಿ, ಸಾಂಬಾರ್, ರಸಂ ಪುಡಿಗಳು, ಗರಂ ಮಸಾಲ, ಸೀಗೇಕಾಯಿ ಪುಡಿ ಉಪ್ಪಿನಕಾಯಿಗಳು ಮುಂತಾದವು.



ದಕ್ಷಿಣೇಶ್ವರದ ಮಂದಿರಗಳ ಸಮುಚ್ಚಯ

ಇದು ಈಗ "ಹಳೆಯ ಮಂದಿರ" ಎಂದು ಕರೆಯಲ್ಪಡುವ ಮಂದಿರದ ವಿವರಗಳು. ಬೇಲೂರು ಮಠದಲ್ಲಿ ಈಗಿರುವ ಶ್ರೀರಾಮಕೃಷ್ಣರ ಭವ್ಯ ಮಂದಿರ ಆಗ ಇನ್ನೂ ಪೂರ್ಣಗೊಂಡಿರಲಿಲ್ಲವೆಂಬುದನ್ನು ವಾಚಕರು ಗಮನಿಸಬೇಕು. —**ಸಂ.**]

೮-೧೦-೧೯೨೯ : ಮಂಗಳವಾರ

ಇಂದು ನನ್ನ ಜೀವಮಾನದಲ್ಲಿ ಅತ್ಯಂತ ಶ್ರೇಷ್ಠವಾದ ದಿನಗಳಲ್ಲಿ ಒಂದು! ಏಕೆಂದರೆ ಶ್ರೀಮತ್ ಸ್ವಾಮಿ ಶಿವಾನಂದಜಿಯವರಿಂದ ನನಗೆ ದೀಕ್ಷೆ ಲಭಿಸಿತು. ಇದರ ವಿಷಯ ರಹಸ್ಯವಾಗಿರಬೇಕಾದುದರಿಂದ ನಾನು ಇಲ್ಲಿ ಏನನ್ನೂ ಬರೆಯುವುದಿಲ್ಲ.

.... ಸುಮಾರು ಮೂರೂವರೆ ಗಂಟೆಯ ಹೊತ್ತಿಗೆ ಅನಂತಾನಂದ, ಸಿದ್ಧೇಶ್ವರಾನಂದ ಮತ್ತು ಇತರ ಸಿಂಹಳದ ಮಿತ್ರರೊಡನೆ ಒಂದು ದೋಣಿಯಲ್ಲಿ ಕುಳಿತು ದಕ್ಷಿಣೇಶ್ವರಕ್ಕೆ ಹೊರಟೆವು. ನವಯುಗಾವತಾರರಾದ ಶ್ರೀರಾಮಕೃಷ್ಣರ ಸಂಗದಿಂದ ಆ ಸ್ಥಳ ಜಗತ್ ಪಾವನವಾದುದಾಗಿದೆ. ನನ್ನ ಕಲ್ಪನೆಗೆ ಹಿಂದಿನ ಸ್ಮರಣೆಯೆಲ್ಲವೂ ಬಂದು ಭಾವೋನ್ಮತ್ತನಾದೆ.

ನದಿಯ ವಿಶಾಲ ಗಂಭೀರ ವಕ್ಷಸ್ಥಲದ ಮೇಲೆ ದೋಣಿ ಸರಾಗವಾಗಿ ತೇಲಿತು. ಬೇಲೂರು ಮಠದ ಸ್ನಾನಘಟ್ಟದಿಂದ ದಕ್ಷಿಣೇಶ್ವರದ ಸ್ನಾನಘಟ್ಟಕ್ಕೆ ಸುಮಾರು ಎರಡೂವರೆ ಮೈಲಿಗಳಿರಬಹುದು. ಮಹಾಪುರುಷನೊಬ್ಬನು (ತನ್ನ ಆಧ್ಯಾತ್ಮಿಕ ಸಾಧನೆಯಿಂದ) ಜನ್ಮವೆತ್ತಿದ ಸ್ಥಳಕ್ಕೆ ಹೋಗುತ್ತಿರುವೆನಲ್ಲಾ ಎಂದು ನನ್ನ ಹೃದಯ ಪಾವನವಾಗತೊಡಗಿತು. ದಡಗಳಲ್ಲಿರುವ ಮನೆ, ಮಠ, ತೆಂಗಿನಮರ, ಹೊಗೆಯಾಡುವ ನವನಾಗರಿಕತೆಯ ಚಿಮ್ನಿಗಳು, ನೀಲಾಗಸ, ತೇಲುವ ಬೆಳ್ಮುಗಿಲು, ಬೈಗಿನ ಕೆಂಪಿನ ನೇಸರು ಎಲ್ಲವೂ ಆನಂದಕರವಾಗಿದ್ದುವು. ಹೊಸದಾಗಿ ಕಟ್ಟುತ್ತಿರುವ ಕಬ್ಬಿಣದ ಸೇತುವೆಯನ್ನು ದಾಟಿದೆವು. ಶ್ರೀಗುರುದೇವನ ಕಾಲದ ದಕ್ಷಿಣೇಶ್ವರದ ಪವಿತ್ರತಮವಾದ ಗಂಭೀರಶಾಂತಿ ನವನಾಗರಿಕತೆಯ ಯಂತ್ರಗಳ ದಾಂದಲೆಗೆ ಒಳಗಾಗಿ ಹೋಗಿದೆ. ಆದರೂ ನನಗೆ ದಕ್ಷಿಣೇಶ್ವರದಲ್ಲಿ ಆತ್ಮಜ್ಯೋತಿಯ ಅನುಭವ ಆಗದೆ ಹೋಗಲಿಲ್ಲ. ಸ್ನಾನಘಟ್ಟದಲ್ಲಿ ಇಳಿದು ಗಂಗೆಯಲ್ಲಿ ಕೈಕಾಲು ತೊಳೆದುಕೊಂಡು ಗುಡಿಯನ್ನು ಪ್ರವೇಶಿಸಿದೆವು. ಆರಾರು ಶಿವ ದೇವಾಲಯಗಳು ಎರಡೂ ಪಕ್ಕದಲ್ಲಿವೆ. ಒಳಗೆ ಅಂಗಣ. ಅಲ್ಲಿ ಎಡಗಡೆ ರಾಧಾಗೋವಿಂದ. ಮಧ್ಯೆ ಕಾಳಿಯ ಗುಡಿ. ಬಲಕ್ಕೆ ನಾಟ್ಯಮಂದಿರ. ಸುತ್ತಲೂ ಪ್ರಾಕಾರ. ಮೊದಲು ಹೋಗಿ ಭಗವಾನರ ಮಹಾಮಾತೆಯಾದ ದೇವಿಯ ದರ್ಶನ ಮಾಡಿದೆವು. ಗುರುದೇವನು ಅರ್ಚಿಸಿದ ವಿಗ್ರಹವನ್ನು ನೋಡಿದೆ. ಆತನು ತುಳಿದ ನೆಲವನ್ನು ತುಳಿದಾಗ ನನ್ನ ಮನಸ್ಸು ಗಗನಕ್ಕೆ ಹಾರಿತು. ಅಲ್ಲಿ "ರಾಮಲಾಲ" ವಿಗ್ರಹವನ್ನೂ ನೋಡಿದೆವು. ಖಡ್ಗವನ್ನೂ ನೋಡಿದೆವು. ಆಹಾ ಇಲ್ಲಿಯೇ ಮಹತ್ಕಾರ್ಯಗಳು ನಡೆದವಲ್ಲವೆ? ದಕ್ಷಿಣೇಶ್ವರದಲ್ಲಿ ಜಡವೆಂಬುದಿಲ್ಲ. ಸರ್ವವೂ ಚೈತನ್ಯಮಯ. ಅಲ್ಲಿಯ ಕಲ್ಲು ಮಣ್ಣು ಮರ ಧೂಳು ಗಾಳಿ ಗಗನ ಎಲ್ಲವೂ ಕತೆ ಹೇಳುತ್ತವೆ, ಮಾತಾಡುತ್ತವೆ. ಎಲ್ಲವೂ ಗುರುಗಳೆ! ನಾನು ಶಿಷ್ಯ!

ಅಲ್ಲಿಂದ ಗುರುದೇವನು ವಾಸಿಸುತ್ತಿದ್ದ ಕೊಠಡಿಗೆ ಹೋದೆವು. ಎಲ್ಲವೂ ಆಗ ಇದ್ದ ಹಾಗೆಯೆ ಇವೆ. ಆತನು ಮಲಗುತ್ತಿದ್ದ ಮಂಚಗಳು, ಆಗ ಅಲ್ಲಿದ್ದ ಚಿತ್ರಪಟಗಳು, ಆತನು ಉಪಯೋಗಿಸುತ್ತಿದ್ದ ನೀರಿನ ಹಂಡೆ! ನಾವು ಅದರಿಂದ ನೀರು ಕುಡಿದೆವು. (ಅಂದರೆ ತೀರ್ಥದ ರೂಪದಲ್ಲಿ ಬಾಯಿಗೆ ಬಿಟ್ಟುಕೊಂಡೆವು.) ಅವರು ಬರೆದ ಕೈಯಕ್ಷರ. ಸಾಷ್ಟಾಂಗ ನಮಸ್ಕಾರ ಮಾಡಿದೆವು. ನಾನು ಹುಚ್ಚನಂತೆ ಆಗಿಬಿಟ್ಟೆ. ಕುಳಿತು ಧ್ಯಾನ ಮಾಡೋಣ ಎಂದು ನಿರ್ಧರಿಸಿ ಕಣ್ಣು ಮುಚ್ಚಿದೆವು.

ಅಷ್ಟರಲ್ಲಿ ಶ್ರೀಗುರುದೇವನ ಶುಶ್ರೂಷೆಯನ್ನು ಹದಿನಾಲ್ಕು ವರ್ಷಗಳ ಪರಿಯಂತ ಮಾಡಿದ, ಈಗ ಮುದುಕರಾಗಿರುವ ಶ್ರೀರಾಮಲಾಲ ದಾದ ಅವರು ಬಂದರು. ಎಲ್ಲರೂ ಎದ್ದು ಪ್ರಣಾಮ ಮಾಡಿದೆವು. ಅವರು ಆಶೀರ್ವದಿಸಿದರು. ಅವರಿಗೆ ಇಂಗ್ಲಿಷ್ ಬರುವುದಿಲ್ಲ. ಬಂಗಾಳಿಯಲ್ಲಿ

ಮಾತಾಡಿದರು. ನಮ್ಮ ಆಕೃತಿಗಳನ್ನು ನೋಡಿ ರೂಪದಿಂದ ಹೇಗೆ ಹೃದಯವನ್ನು ತಿಳಿಯಬಹುದೆಂದು ಹೇಳಿದರು. ನಾವೆಲ್ಲರೂ ಅವರ ಸುತ್ತ ಕುಳಿತೆವು. ದಕ್ಷಿಣೆ ಕೊಟ್ಟು ನಮಸ್ಕಾರ ಮಾಡಿದೆವು. (ದಕ್ಷಿಣೇಶ್ವರದಲ್ಲಿ ಪೂಜಾರಿಗಳು ದಕ್ಷಿಣೆ ಕೇಳುವುದಿಲ್ಲ.) ತರುವಾಯ ರಾಮಲಾಲ ದಾದರ ಫೋಟೋ ತೆಗೆದುಕೊಂಡೆವು.

ಅಲ್ಲಿಂದ ಮಹಾಮಾತೆ ವಾಸಿಸುತ್ತಿದ್ದ ಒಂದು ಚಿಕ್ಕ ಬೆಳಕಿಲ್ಲದ ಮಂದಿರಕ್ಕೆ (ನಹಬತ್ ಖಾನೆ) ಹೋದೆವು. ಅದನ್ನೆಲ್ಲ ನೋಡಿ ನಾನು ನಿಟ್ಟುಸಿರುಬಿಟ್ಟೆ. ಜಗನ್ಮಾತೆ ಮನುಷ್ಯಾಕೃತಿಯಲ್ಲಿ ಬಂದರೆ ಇದೇನೆ ನಾವು ಆಕೆಗೆ ಕೊಡುವ ಆವಾಸ ಮಂದಿರ?....ಅಲ್ಲಿಂದ ಪಂಚವಟಿಗೆ ಹೋಗಿ ನಮಸ್ಕರಿಸಿದೆವು. ಅಲ್ಲಿಂದ ಬಿಲ್ವವೃಕ್ಷದ ಬಳಿಗೆ ಹೋದೆವು. ಅಲ್ಲಿಯೆ ಪರಮ ಹಂಸರು ತಾಂತ್ರಿಕ ಸಾಧನೆ ಮಾಡಿದುದು. ತೋತಾಪುರಿ ಧುನಿಯ ಬಳಿಯಲ್ಲಿ ಕುಳಿತಿದ್ದಾಗ ಕಂಡ ಬ್ರಹ್ಮದೈತ್ಯನ ಮರವನ್ನೂ ನೋಡಿದೆವು. ಮಥುರಬಾಬುವಿನ ಅರಮನೆ ಈಗ ಮುರಿದುಬೀಳುತ್ತಿದೆ. **ಗುರುದೇವನು ತನ್ನ ಕೈಯಿಂದಲೆ ಬರೆದ ಚಿತ್ರವು ಇನ್ನೂ ಗೋಡೆಯ ಮೇಲೆ ಇದೆ. ಇದ್ದಲಿನಲ್ಲಿ ಬರೆದಿದ್ದಾರೆ. ಒಂದು ಹಕ್ಕಿ ಒಂದು ಹೂವಿನ ಗಿಡದ ಮೇಲೆ ಕೂತಂತಿದೆ.** ಗುರುಮಹಾರಾಜರು ಇಸ್ಲಾಂ ಸಾಧನೆ ಮಾಡಿದ ಸ್ಥಳ, ಅವರು ಮೊದಲು ಮಥುರಬಾಬುವಿನ ಅರಮನೆಯಲ್ಲಿಯೇ ಸಾಧನೆ ಮಾಡಿದ ಕೋಣೆ ನೋಡಿದೆವು. ದಕ್ಷಿಣೇಶ್ವರದಲ್ಲಿ ಪ್ರತಿಯೊಂದು ವಸ್ತುವೂ ಪವಿತ್ರವಾದುದೆ! ಅದರಲ್ಲಿಯೂ ಗುರುದೇವನ ಜೀವನ ಚರಿತ್ರೆಯನ್ನು ಚೆನ್ನಾಗಿ ಓದಿದವನಿಗಂತೂ ಹೇಳಬೇಕಾದುದೇ ಇಲ್ಲ! ನಾನೇನಾದೆನೋ ನನಗೇ ಗೊತ್ತಿಲ್ಲ.

ಶಿವದೇವಾಲಯಗಳನ್ನು ನೋಡಿದೆವು. ಶ್ರೀರಾಮಲಾಲ ದಾದರು ಪ್ರಸಾದ ಹಂಚಿದರು. ಹಣೆಗೆ ಬೊಟ್ಟಿಟ್ಟರು. ಅಷ್ಟು ಹೊತ್ತಿಗೆ ಕತ್ತಲಾಗುತ್ತಿತ್ತು. ಪಡುವಣ ಗಗನವು ದಕ್ಷಿಣೇಶ್ವರದ ಅಗೋಚರವಾದ, ಅನುಭವಮಾತ್ರ ವೇದ್ಯವಾದ ಆತ್ಮ ಜ್ಯೋತಿಯನ್ನು ಪ್ರತಿಬಿಂಬಿಸುವಂತೆ ರಹಸ್ಯ ರಮಣೀಯವಾಗಿ ರಂಜಿಸುತ್ತಿತ್ತು. ನನಗೆ ಎಲ್ಲವೂ ಯಾವುದೋ ಒಂದು ಮಹಾ ಸುವರ್ಣ ಸ್ವಪ್ನದೋಪಾದಿಯಲ್ಲಿ ತೋರಿತು. 'ಹಾ! ಗುರುದೇವ, ಕ್ಷಣಮಾತ್ರ ನಿನ್ನ ಸ್ಥೂಲರೂಪದ ದರ್ಶನವಿತ್ತು ನನ್ನನ್ನು ಕೃತಾರ್ಥನನ್ನಾಗಿ ಮಾಡು' ಎಂದೆನು. 'ಬಾ ಬಾ ಗುರುವೆ, ನೀನೆಲ್ಲಿರುವೆ?' 'ಯಾತ್ರಿಕನೆ, ಕೈಮುಗಿ, ದೋಣಿಯಿಂದಿಳಿ ಕೆಳಗೆ. ಇಲ್ಲಿಗೆ ಮರ್ತ್ಯವು ಮುಗಿಯಿತು. ಇನ್ನು ಮುಂದಿರುವುದು ಸ್ವರ್ಗ. ಗಂಗೆಯ ನೀರಿನಿಂದ ಪವಿತ್ರನಾಗಿ ಮಂದಿರವನ್ನು ಪ್ರವೇಶಿಸು.' ಹೀಗೆಲ್ಲ, ಮುಂದೆ ನಾನು ಬರೆಯಬಹುದಾದ ಕವನಗಳಿಗೆ ಹಾದಿಹಾಕುವಂತೆ ಮನದಲ್ಲಿಯೆ ಹೇಳಿಕೊಂಡೆ.



ದಕ್ಷಿಣೇಶ್ವರದಲ್ಲಿ ಇರುವ ಶ್ರೀರಾಮಕೃಷ್ಣರ ಕೋಣೆಯಲ್ಲಿ ಗೋಡೆಯ ಮೇಲೆ ಶ್ರೀರಾಮಕೃಷ್ಣರು ತಮ್ಮ ಕೈಯಿಂದಲೆ ಬರೆದ ಚಿತ್ರ. ಈ ಪ್ರತಿಕೃತಿ ಕುವೆಂಪು ಅವರದ್ದು.

ಮನಸ್ಸಿಲ್ಲದ ಮನಸ್ಸಿನಿಂದ ದೋಣಿಗೆ ಬಂದೆವು. ಷಷ್ಠಿಯ ಚಂದ್ರನು ಬಾಂದಳದಲ್ಲಿ ಮೆರೆಯುತ್ತಿದ್ದನು. ಗಂಗಾಜಲವೆಲ್ಲ ಅವನ ಮಂದಕಾಂತಿಯಿಂದ ಅಲ್ಪಪ್ರಕಾಶಮಾನವಾಗಿತ್ತು. ನಾಗರಿಕತೆಯ ಸದ್ದುಗಳು ಕೇಳಿಸುತ್ತಿದ್ದುವು. ಆದರೆ ಸ್ವಪ್ನಸ್ಥನಂತಿದ್ದ ನನಗೆ ಎಲ್ಲವೂ ಶಾಂತಿಯಿಂದ ಮಹಿಮೆಯಿಂದ ಆನಂದದಿಂದ ತುಂಬಿ ತುಳುಕುತ್ತಿತ್ತು. ದೋಣಿ ಬೇಲೂರು ಮಠಕ್ಕೆ ಹೊರಟಿತು. ನಾನು 'ದೂರ, ಬಹುದೂರ, ಹೋಗುವ ಬಾರಾ' ಎಂಬ ನನ್ನ 'ದೋಣಿಗನ ಹಾಡು' ಅನ್ನು ಮೆಲ್ಲಗೆ ಹಾಡಿಕೊಳ್ಳತೊಡಗಿದೆ. ಅನಂತಾನಂದ ಸ್ವಾಮಿಗಳು ನನ್ನನ್ನು ಗಟ್ಟಿಯಾಗಿ ಹಾಡುವಂತೆ ಬೆಸಸಿದರು. 'ಶ್ರೀರಾಮಕೃಷ್ಣ ಪರಮಹಂಸ' ಎಂಬ ಕವನವನ್ನು ಕೊರಳೆತ್ತಿ ಹಾಡಿದೆನು. ತರುವಾಯ 'ಗಾನದರ್ಶನ'ವನ್ನೂ ಹಾಡಿದೆ. ಬೊಂಬಾಯಿ ಆಶ್ರಮದ ಗುಣಾತೀತಾನಂದರು ಮರಾಠಿಯ ಹಾಡೊಂದನ್ನು ಹಾಡಿದರು.

ಸ್ವಾಮಿ ಸಿದ್ಧೇಶ್ವರಾನಂದರು "ಶ್ರೀರಾಮಕೃಷ್ಣ ಮಿಶನ್ ಎಂದರೆ ಸರ್ವಧರ್ಮಭಾಷಾ ಪಾಕಸಮನ್ವಯ! ತಮಿಳಿನ ಗೀತೆಯೊಂದನ್ನು ಹಾಡಿ" ಎಂದು ಸಿಂಹಳದವರಿಗೆ ಹೇಳಿದರು. ತಾವೇ ತೆಲುಗಿನ ಕೀರ್ತನೆ ಹಾಡುವುದಾಗಿಯೂ ಹೇಳಿದರು. ನಾನು ಡಿ.ವಿ. ಗುಂಡಪ್ಪನವರ 'ವನಸುಮ' ಎಂಬ ಪದ್ಯ ಹಾಡಿದೆ. ಆಹಾ! ಗಂಗಾಮಾತೆ ನನ್ನ ನೆಚ್ಚಿನ ಕನ್ನಡವನ್ನಾಲಿಸಿ ತೆರೆಗಳೆಂಬ ಮುಗುಳುನಗೆಯ ಲೀಲೆಯಿಂದ ನನ್ನ ಸುತ್ತಲೂ ನಲಿದಳು! ನಮ್ಮ ಯಾತ್ರೆ ಅತ್ಯಂತ ಪವಿತ್ರವೂ ರಮ್ಯವೂ ಭಾವಮಯವೂ ಪ್ರಶಾಂತವೂ ಆಗಿತ್ತು! ಓಃ ದಿನ! (ನನ್ನ ತಾಯಿ ತಂದೆ ತಂಗಿ ಮೊದಲಾದ ಗತಿಸಿದವರನ್ನೆಲ್ಲ (ತಿಮ್ಮು ಇತ್ಯಾದಿ)—ದಕ್ಷಿಣೇಶ್ವರದಲ್ಲಿ ನೆನೆದೆ.

(ಮುಂದುವರೆಯುವುದು)

ಪ್ರಾಯೋಜಕರು : ಎಸ್.ಸಿ. ಜಯಶಂಕರ ಸ್ವಾಮಿ, M/s, ಭಾರತಿ ಇಂಜಿನಿಯರಿಂಗ್ ವರ್ಕ್ಸ್, 13ನೇ ಮೇನ್, 3ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು - 560 010